





# ಮರದ ಮೇಲೆ ಹೋಟೆಲ್

ನಗರಗಳ ಮಾಲಿನ್ಯದಿಂದಾಗಿ ಮನುಷ್ಯ ಬೇಸತ್ತಿದ್ದಾನೆ. ಆತನಿಗೀಗ ಕಾಡಿನ ಸೆಳೆತ. ಕಾಡಿನ ನಿಸರ್ಗರಮ್ಯ ಪರಿಸರದಲ್ಲಿ ನಾಡಿನ ಎಲ್ಲ ಸೌಲಭ್ಯಗಳಿದ್ದರೆ ಹೇಗೆ.. ಎಂದು ಯೋಚಿಸುತ್ತಿದ್ದಾನೆ. ಅದರ ಫಲವಾಗಿ ಕಾಡಿನಲ್ಲೊಂದು ನಾಡ ಹೊಟೇಲ್ ರೂಪ ತಾಳಿದೆ. ಇದೇ 'ಮರದ ಮೇಲಿನ ಹೊಟೇಲ್'!

ಸ್ವೀಡನ್ನಿನ ಹರಾಡ್ಸ ಎಂಬಲ್ಲಿ ಈ ಮರಹೋಟೆಲ್ ಇದೆ. ಅರ್ಕ್‌ಟಿಕ್ ವೃತ್ತದಿಂದ 40 ಕಿ.ಮೀ ಅಂತರದಲ್ಲರುವ ಈ ತಂಗುದಾಣದಲ್ಲಿ ಸುಸಜ್ಜಿತ ನಾಲ್ಕು ಕೋಣೆಗಳಿವೆ. ಪ್ರತಿ ಕೋಣೆಯನ್ನೂ ಒಬ್ಬೊಬ್ಬ ವಿಖ್ಯಾತ ವಿನ್ಯಾಸಕಾರರು ರೂಪಿಸಿದ್ದಾರೆ. ಹೀಗಾಗಿ ಅವು ಒಂದರಂತೆ ಒಂದಿಲ್ಲ; ಒಂದರಲ್ಲೂ ಕುಂದಿಲ್ಲ!

ಅರಣ್ಯದಲ್ಲಿರುವ ಬೃಹತ್ ಪೈನ್ ಮರಗಳ ಮೇಲೆ ಈ ಮಾನವ ಗೂಡುಗಳು ನೇತಾಡುತ್ತಿವೆ. ನೆಲದಿಂದ 6 ಅಡಿ ಎತ್ತರದಲ್ಲಿ ಆರಂಭವಾಗಿ 40 ಅಡಿ ಎತ್ತರದವರೆಗೆ ಹರಡಿಕೊಂಡಿವೆ. ಮನ ಸೂರೆಗೊಳ್ಳುವ ವೈಭವೋಪೇತ ಈ ಕೋಣೆಗಳಲ್ಲಿ ಕುಳಿತುಕೊಂಡೇ ಕಾಡಿನ ಎಲ್ಲ ಸೌಂದರ್ಯವನ್ನು ಆಸ್ವಾದಿಸಬಹುದು. ಪಾರದರ್ಶಕ ನೆಲ– ಗೋಡೆ– ಛಾವಣಿಗಳುಳ್ಳ ಈ 'ಮಿರರ್ರ್ ಕ್ಯೂಬ್' ಕೋಣೆಗಳಿಂದ ಎಲ್ಲ ದಿಕ್ಕುಗಳನ್ನು ಹಾಗೂ ಭೂಮಿ– ಆಕಾಶವನ್ನೂ ನಿರಾಯಾಸವಾಗಿ ನೋಡಬಹುದು.

ಪ್ರತಿ ಕೋಣೆಯಲ್ಲೂ ಎರಡು ಹಾಸಿಗೆ, ಕುಳಿತುಕೊಳ್ಳಲು ಸುಖಾಸನ, ಪರಿಸರ ಸ್ನೇಹಿ ಶೌಚಗೃಹ ಇವೆ. ಆದರೆ ಯಾವ ಕೋಣೆಯಲ್ಲೂ ಟಿ.ವಿ ಇಲ್ಲ! ಕಟ್ಟಿಗೆಯ ನಿಚ್ಚಣಿಕೆ ಹಾಗೂ ಹಗ್ಗಗಳ ಸಹಾಯದಿಂದ ಕೋಣೆಯೊಳಗೆ ಪ್ರವೇಶಿಸಬೇಕು.

ಈ ಹೋಟೆಲ್ ಕೆಂಟ್ ಲಿಂಡವಾಲ್ ಹಾಗೂ ಬ್ರಿಟ್ಟಾ ಜಾನ್ಸನ್ ಲಿಂಡವಾಲ್ ದಂಪತಿಯ ಕಲ್ಪನೆಯ ಕೂಸು. ಈ 4 ಕೋಣೆಗಳ ತಂಗುದಾಣವನ್ನು ಮುಂದಿನ 5 ವರ್ಷಗಳಲ್ಲಿ, 25 ಕೋಣೆಗಳ ದೊಡ್ಡ ಹೋಟೆಲ್ಲಾಗಿಸುವ ಐಡಿಯಾ ಇದೆಯಂತೆ. ಸದ್ಯಕ್ಕೆ ಇಲ್ಲಿ ವಾಸಿಸಲು ಒಂದು ರಾತ್ರಿಗೆ 390 ಪೌಂಡ್ ಬಾಡಿಗೆ ಇದೆ. (ಅಂದಾಜು 29 ಸಾವಿರ ರೂಪಾಯಿ ಅಷ್ಟೆ!)

■ ಸುಭಾಸ ಯಾದವಾಡ

